ಮಾಡುವಂತಹ ಸರಕು, ಸರಂಜಾವು ಅಲ್ಲ. ಆರ್ಡರಿಗೆ ತಕ್ಕಂತೆ, ಗಿರಾಕಿಗಳಿಗೆ ತಕ್ಕಂತೆ, ಗಿರಾಕಿಯ ಅಭಿರುಚಿಗೆ ಸಲುವಂತೆ, ಕಿಸೆಯ ಕಾಸಿಗೆ ಒಪ್ಪುವಂತೆ, ಮಾರ್ಕೆಟ್ ಪರಿಸ್ಥಿತಿಯನ್ನು ಗಮನಿಸಿ ಮಾಡುವ ಉತ್ಪನ್ನವಲ್ಲ. ಒಳ್ಳೆಯ ಬದುಕಿನ ಪ್ರತಿಫಲವಾಗಿ ಹುಟ್ಟಬಹುದಾದ ಸವಿಗನಸು. ಎಲ್ಲರಂತೆ ಸಾಹಿತಿಯಾದವನೂ ಜೀವನ ಮಾಡುತ್ತಾನೆ. ಕೆಲವರಂತೆ ಆತ ಈ ಜೀವನವನ್ನು ಆದಷ್ಟು ವಿಶಾಲವಾಗಿ, ಸೂಕ್ಷ್ಮವಾಗಿ ನೋಡಲು ಕಲಿಯುತ್ತಾನೆ. ಅದರಲ್ಲಿ ಅವನ ಪಾಲಿಗೆ ತಿಳಿಯುವುದೆಷ್ಟೋ, ತಿಳಿಯಲಾರದುದೆಷ್ಟೋ. ಜೀವನ ಎಂಬುದೇನು? ತನ್ನ ಅದರ ಸಂಬಂಧವೇನು? ಎಂದು ತಿಳಿಯಲು ಪ್ರಯತ್ನಿಸಿ, ಬಾಳಲು ಪ್ರಯತ್ನಿಸುವ ಜೀವನ ಸಂಗ್ರಾಮವು ಅವನಿಗೆ ತಂದೊಡ್ಡುವ ವಿವಿಧ ಅನುಭವ, ಭಾವ, ಆವೇಶಗಳ ಫಲವಾಗಿ, ಸಾಹಿತ್ಯ ಕಲೆಗಳು ಹುಟ್ಟುತ್ತವೆ. ತನ್ನ ಬದುಕಿನಲ್ಲೆಷ್ಟು ಅವನು ಪಾಲುಗಾರನೋ, ಇತರರ ಬದುಕಿನಲ್ಲೂ ಅಷ್ಟೇ ಪಾಲುಗಾರನಾಗುವಂತೆ ಸಾಹಿತಿಯೂ ಕಲಾವಿದನೂ ತನ್ನ ದೃಷ್ಟಿಯನ್ನು ವಿಶಾಲಿಸಬೇಕು. ತನ್ನ ಅನುಕಂಪವನ್ನು ವಿಸ್ತಾರವಾಗಿ ಹರಡಬೇಕು. ತನ್ನತನವನ್ನು ಮರೆಯುತ್ತ ಬಂದು, ಅನ್ಯರ ಕಣ್ಮನಗಳಿಂದಲೂ ನೋಡಲು, ತಿಳಿಯಲು ಪ್ರಯತ್ನಿಸಬೇಕು. ಈ ಪ್ರಯತ್ನ ದೊಡ್ಡ ಬದುಕಿನಿಂದ ಮಾತ್ರ ಸಾಧ್ಯವಾದುದು. ನಮ್ಮ ಬದುಕು ದೊಡ್ಡದಾಗದೆ ನಮ್ಮ ಸಾಹಿತ್ಯ ಎಂದೂ ದೊಡ್ಡದಾಗಲಾರದು. ನಮ್ಮ ಅನುಕಂಪ ದೊಡ್ಡದಾಗದೆ, ಬದುಕಿನಲ್ಲಿ ಗೋಚರಿಸುವ ಸರಸ ವಿರಸಗಳ, ಸುಖ ದುಃಖಗಳ, ಅರ್ಥ, ಬೆಲೆ ನಮಗೆ ಸಮನಾಗಿ ತಿಳಿಯಲಾರದು. ಅವನ್ನು ಸಮನಾಗಿ ತಿಳಿಯುವತನಕ, ನಾವೂ ಚೆನ್ನಾಗಿ ಬೆಳೆಯಲಾರೆವು. ಬರಿಗಿಸೆಯ ಭಿಕಾರಿಯೊಬ್ಬ, ಇನ್ನೊಬ್ಬ ಭಿಕ್ಷುಕನಿಗೆ ಏನು ಕೊಡಬಲ್ಲ? ತನ್ನ ದೃಷ್ಟಿಯನ್ನು ಬೆಳೆಯಿಸಿಕೊಳ್ಳದ ಕುರುಡ, ಜಗತ್ತಿಗೆ ಹೇಗೆ ದಾರಿ ತೋರಿಸಬಲ್ಲ? ತಾನು ಕಲಿಯಬೇಕಾದುದನ್ನು ಕಲಿಯಲಾರದ ಶುಂಠ ಪರರಿಗೆ ಏನು ಬೋಧನೆ ಕೊಡಬಲ್ಲ? ಅಲ್ಲಿಯ ತನಕ ಅವನು ಕೊಡುವುದು ಶಬ್ದ, ವಾಕ್ಯ, ಪುಟಗಳೇ ಹೊರತು ಸಾಹಿತ್ಯವನ್ನಲ್ಲ.

ನಮ್ಮಲ್ಲನೇಕರಿಗೆ ಆತ್ಮವಿಶ್ವಾಸ ಅತ್ಯಧಿಕ. ನಿಜ, ಈ ವಿಶ್ವಾಸವಿಲ್ಲದವನು ಬಾಳಲಾರ, ಪ್ರಪಂಚದ ಹೋರಾಟದಲ್ಲಿ ಅಂಜಿ, ಅಳುಕಿ ಕುಳಿತವನು ಹಿಂದೆಯೇ ಉಳಿಯುತ್ತಾನೆ. ಅಂದರೆ ಮುಂದೆ ಓಡುವವನಿಗೆ, ತಾನು ಯಾಕೆ ಮುಂದೆ ಹೋಗುತ್ತೇನೆ, ಎಲ್ಲಿ ಹೋಗುತ್ತಿದ್ದೇನೆ ಎಂಬುದರ ಅರಿವಿಲ್ಲದಿದ್ದರೆ, ಆತನ ನೂಕುನುಗ್ಗಲಿನ ಪ್ರಯೋಜನವಾದರೂ ಏನು? ನಿಜ, ಜೀವನದ ಸ್ಪರ್ಧೆಯಲ್ಲಿ ಆತ್ಮವಿಶ್ವಾಸ ಬೇಕೇಬೇಕು. ಸಾಹಿತಿಗೂ ಅದು ಬೇಕು. ಅದಿಲ್ಲದಿದ್ದರೆ ಅವನ ನಾಲಿಗೆ ನುಡಿಯಲಾರದು; ಲೇಖನಿ ಓಡಲಾರದು. ಅದು ಅವನಲ್ಲಿ ಇರಬೇಕಾದ ಒಂದು ಗುಣ. ಆದರೆ ಅದೇ ಸಾಹಿತ್ಯದ ಸರ್ವಾಧಾರವಲ್ಲ. ಧೈರ್ಯದಿಂದ ಬರೆದುದೆಲ್ಲವೂ ಸಾಹಿತ್ಯವಾಗಲಾರದು.

ನಮ್ಮ ಕಲ್ಪನೆ, ನಮ್ಮ ಅನುರಕ್ತಿ, ನಮ್ಮ ರಾಗದ್ವೇಷ, ನಮ್ಮ ಮಾತುಗಾರಿಕೆ ಅಥವಾ ಬರಹಗಾರಿಕೆ – ಇವು ನಮ್ಮ ಸಾಹಿತ್ಯ ಜೀವನಕ್ಕೆ ನೆರವು ಕೊಡುತ್ತವೆ; ಪುಟ ಕೊಡುತ್ತವೆ. ಕಲ್ಪನಾಶಕ್ತಿಯಿಲ್ಲದವನು ಇತರರ ಮನಸ್ಸನ್ನು ಅಷ್ಟೊಂದು ಸಮರ್ಥವಾಗಿ ಕೆರಳಿಸಲಾರ; ಅರಳಿಸಲಾರ. ಆದರೆ ತನ್ನ ಕೊಠಡಿಯ, ತನ್ನ ಕುರ್ಚಿಯ, ತನ್ನ ಊರಿನ, ತನ್ನ ಅಭಿನಂದಕರ ಗುಂಪಿನ ಮೇರೆಯಲ್ಲಿ ಆವೃತವಾಗಿ ಹಾರಾಡುವ ಕಲ್ಪನಾವಿಲಾಸಕ್ಕೆ, ವೈಖರಿಗೆ ಅಷ್ಟೇ ಮಿತಿಯುಂಟು. ಅದು ಪ್ರೇರಿಸಬಲ್ಲ ಶಕ್ತಿ ಉತ್ಸಾಹಗಳಿಗೂ ಆ ಮಿತಿಯುಂಟು. ಎಳೆಯರಾಗಿದ್ದಾಗ ನಾವೆಲ್ಲರೂ ಇಂಥ ಅನೇಕ ಕಲ್ಪನಾವಿಲಾಸಗಳಲ್ಲಿ ಮೈಮರೆತು ಗಂಟೆ, ದಿನಗಳನ್ನು ಕಳೆದಿದ್ದೆವು. ನಮ್ಮಷ್ಟೇ ಸ್ವಾರ್ಥಪರವಾದ ನಮ್ಮ ಜೀವನ ಬೆಳೆದುಬಂದಂತೆ ಏನಾಯಿತು? ಅನೇಕ ಜೀವಗಳು ನಮಗೆದುರಾದವು. ಬದುಕಿನ ಪ್ರಶ್ನೆಗಳು ಎದುರುಬಂದವು; ಒಂದು ಕಾಲದ ಕಲ್ಪನೆಯ ಹೂವಿನ ಹಾಸಿಗೆಯು ಕಲ್ಲು ಮುಳ್ಳುಗಳಿಂದ ತುಂಬಿದ ಕಠಿಣ ಮಾರ್ಗವಾಗಿ ಕಾಣಿಸತೊಡಗಲಿಲ್ಲವೆ? ದಾರಿಯ ಕಲ್ಲು